ಬಿ.ಡಿ.ಎ. ನಿವೇಶನಗಳ ಸಕ್ರಮ ಗೊಳಿಸುವಿಕೆ

159(407) ಶ್ರೀ ಪಾಪಣ್ಣ ವಿ (ಹುಣಸೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬಿ.ಟಿ.ಎಂ.ಬಡಾವಣೆಯಲ್ಲಿ ಬೆಂಗಳೂರು ಅಭಿವೃದ್ದಿ ಪ್ರಾಧಿಕಾರದವರು ರಚಿಸಿರುವ ನಿವೇಶನಗಳಲ್ಲಿ ಅನಧಿಕೃತವಾಗಿ ಕಳೆದ 20 ವರ್ಷಗಳಿಂದ ಮನೆ ಕಟ್ಟಿಕೊಂಡು ವಾಸಿಸುತ್ತಿರುವವರು ಯಾರು:

ಆ. ಸದರಿ ನಿವೇಶನಗಳನ್ನು ಅವರುಗಳಿಗೆ ಸಕ್ರಮಗೊಳಿಸಿ ಕೊಡಲು ಇರುವ ತೊಂದರೆಗಳೇನು;

ಇ. ಮೇಲ್ಕಂಡ ಸ್ಥಳದಲ್ಲಿ ಈಗಾಗಲೇ ನಿವೇಶನ ಸಂಖ್ಯೆ 30ರಲ್ಲಿ ಅನಧಿಕೃತವಾಗಿ ವಾಸಿಸುತ್ತಿದ್ದವರಿಗೆ ಸಕ್ರಮಗೊಳಿಸಿರುವುದು ನಿಜವಲ್ಲವೇ;

ಈ. ಹಾಗಿದ್ದಲ್ಲಿ, ಇತರರಿಗೂ ಸಕ್ರಮಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು)

ಅ. ಬಿ.ಟಿ.ಎಂ.(ಇಡಬ್ಲ್ಯೂಎಸ್) ಬಡಾವಣೆಯಲ್ಲಿ ಅನಧಿಕೃತವಾಗಿ ಮನೆಗಳನ್ನು ಕಟ್ಟಿಕೊಂಡು ವಾಸಿಸುತ್ತಿರುವವರ ಹೆಸರುಗಳು ಈ ಕೆಳಕಂಡಂತಿವೆ;

ಕ್ರಮ ಸಂಖ್ಯೆ	ಹೆಸರು	ನಿವೇಶನ ಸಂಖ್ಯೆ	ಷರಾ
1.	ಶ್ರೀಮತಿ ಎಂ.ಭಾರತಿ ಕೋಂ ಮುರುಗನ್	447	-
2.	ಸುಧಾಕರ್‌ಬಿನ್ ಗೋವಿಂದಸ್ವಾಮಿ	463	ನಿವೇಶನ ಖಾಲಿಇದೆ.
3.	ಶ್ರೀಮತಿ ವಿಜಯ ನಿರ್ಮಲ	135	-
4.	ಶ್ರೀಮತಿ ಧನಲಕ್ಷ್ಮಿ ಕೋಂ ಅಶ್ವತ್ಥ	407:ಎ	ನಿವೇಶನ ಖಾಲಿ ಇದೆ.
5.	ಶ್ರೀಮತಿ ರಾಜಮ್ಮ ಕೋಂ ಮಾದಯ್ಯ		-

ಆ. ಈಮೇಲಿನ ನಿವೇಶನಗಳು ಬಿ.ಟಿ.ಟಿಂ (ಇಡಬ್ಲ್ಯೂಎಸ್) ಬಡಾವಣೆಯಲ್ಲಿ ಬರುತ್ತಿದ್ದು, ಸದರಿ ಬಡಾವಣೆಯನ್ನು 1982ರಲ್ಲಿ ಬೆಂಗಳೂರು ಅಭಿವೃದ್ದಿ ಪ್ರಾಧಿಕಾರವು ರಚಿಸಿರುತ್ತದೆ. ಸುಮಾರು 1000 ನಿವೇಶನಗಳನ್ನು ರಚಿಸಿ ಆರ್ಥಿಕವಾಗಿ ಹಿಂದುಳಿದವರಿಗಾಗಿ ಪುಕ್ಕಟ್ಟೆಯಾಗಿ 1982ರಲ್ಲೇ ಹಂಚಿಕೆ ಮಾಡಲಾಗಿದೆ. ಅನಧಿಕೃತವಾಗಿ ನಿರ್ಮಿಸಿರುವ ಈ ನಿವೇಶನಗಳನ್ನು ಅರ್ಹ ಅರ್ಜಿದಾರರಿಗೆ ಪುಕ್ಕಟ್ಟೆಯಾಗಿ ಹಂಚಿಕೆ ಮಾಡಲಾಗಿದೆ. ಆದುದರಿಂದ ಈ ನಿವೇಶನಗಳಲ್ಲಿ ಅನಧಿಕೃತ ವಾಸ್ತವ್ಯವನ್ನು ಹೊಂದಿರುವ ಮೇಲಿನ ವ್ಯಕ್ತಿಗಳಿಗೆ ಸಕ್ರಮಗೊಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ. ಶ್ರೀ ಟಿ.ಮರಿಯಪ್ಪನವರು ಒಬ್ಬ ಅಂಗವಿಕಲನಾಗಿರುವ ಕಾರಣ, ನಿವೇಶನ ಸಂಖ್ಯೆ 30 ರ ಮೇಲಿನ ಅವರ ವಾಸ್ತವ್ಯವನ್ನು ಮಾನವೀಯತೆ ದೃಷ್ಟಿಯಿಂದ ಚಾಲ್ತಿಯಲ್ಲಿರುವ ಹಂಚಿಕೆ ದರವನ್ನು ವಿಧಿಸಿ ಸಕ್ರಮಗೊಳಿಸಿರುವುದು ನಿಜ.

ಈ. ಈ ಮೇಲಿನ ನಿವೇಶನಗಳನ್ನು ಈಗಾಗಲೇ ಬೇರೆಯವರಿಗೆ ಹಂಚಿಕೆ ಮಾಡಿರುವ ಕಾರಣ. ಈ ನಿವೇಶನಗಳನ್ನು ಸಕ್ರಮಗೊಳಿಸುವ ಪ್ರಶ್ನೆಉದ್ಭವಿಸುವುದಿಲ್ಲ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವಿತರಣೆ ಮಾಡಿದ ನಿವೇಶಗಳು

160(245) ಶ್ರೀ ಪಾಟೀಲ್ ಡಿ.ಆರ್ (ಗದಗ್) : ಮಾನ್ಯ ಮುಖ್ಯಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಪ್ರಸಕ್ತ ಸರ್ಕಾರ ಅಧಿಕಾರ ವಹಿಸಿಕೊಂಡ ನಂತರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವಿತರಣೆ ಮಾಡಿದ ನಿವೇಶನಗಳು ಎಷ್ಟು (ವರ್ಷವಾರು ವಿವರ ಒದಗಿಸುವುದು);

ಆ. ಈ ಹಿಂದಿನ ಸರ್ಕಾರ ಪೂರ್ಣ ಅವಧಿಯಲ್ಲಿ ಪ್ರಾಧಿಕಾರವು ವಿತರಣೆ ಮಾಡಿದ ನಿವೇಶನಗಳು ಎಷ್ಟು;

ಇ. ಪ್ರಾಧಿಕಾರ ಅಸ್ತಿತ್ವಕ್ಕೆ ಬಂದಾಗಿನಿಂದ ಈವರೆಗೆ ವಿತರಣೆ ಮಾಡಿದ ನಿವೇಶನಗಳು ಎಷ್ಟು (ಬಡಾವಣೆವಾರು ವಿವರ ಒದಗಿಸುವುದು)?

ಶ್ರೀ ಎಸ್. ಎಂ. ಕೃಷ್ಣ (ಘೌನ್ಯ ಮುಖ್ಯಮಂತ್ರಿಗಳು)

ಅ. 30,000. (2000 ರಲ್ಲಿ 10,000, 2001 ರಲ್ಲಿ 15,000 ಮತ್ತು 2002 ರಲ್ಲಿ, 5,000 ನಿವೇಶನಗಳು).

ಆ. 1994 ರಲ್ಲಿ 21000 ನಿವೇಶನಗಳನ್ನು ಹಾಗೂ 1998 ರಲ್ಲಿ 13000 ನಿವೇಶನಗಳನ್ನು ಹಂಚಿಕೆ ಮಾಡಲಾಗಿರುತ್ತದೆ.

ಇ. 1976 ರಿಂದ ಇಲ್ಲಿಯವರೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 94,800 ನಿವೇಶನಗಳನ್ನು ಹಂಚಿಕೆ ಮಾಡಿರುತ್ತದೆ. ಬಡಾವಣೆವಾರು ವಿವರ ಸದ್ಯಕ್ಕೆ ಲಭ್ಯವಿರುವುದಿಲ್ಲ.

ರಾಜ್ಯದಲ್ಲಿನ ಗುತ್ತಿಗೆದಾರರಿಗೆ ಪಾವತಿಸಬೇಕಾಗಿರುವ ಬಾಕಿ

161(157) ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ(ಮುಂಡರಗಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿರುವ ಲೋಕೋಪಯೋಗಿ ನೀರಾವರಿ, ಹಾಗೂ ಸಣ್ಣ ನೀರಾವರಿ ಇಲಾಖೆಗಳ ಗುತ್ತಿಗೆದಾರರಿಗೆ ಸರ್ಕಾರ ಕೊಡಬೇಕಾದ ಬಾಕಿ ಹಣವೆಷ್ಟು ಎಷ್ಟು ವರ್ಷಗಳಿಂದ ಬಾಕಿ ಇದೆ. ವಿವರ ನೀಡುವುದು.

ಆ. ಬಾಕಿ ಉಳಿಯಲು ಕಾರಣಗಳೇನು.

ಇ. ಕೊಡಲೇ ಬಾಕಿ ಹಣವನ್ನು ಪಾವತಿಸಲು ಸರ್ಕಾರ ಕೈಗೊಂಡ ಕ್ರಮವೇನು?